ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005 ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕನನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳಿಗೆ ಕೆಲವು ತಿದ್ದುಪಡಿ ತರಲು ಪ್ರಸ್ತಾವ ಮಂಡನೆಗೆ ಕೋರಿಕೆ

ಶ್ರೀ ಹೆಚ್. ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳಿಗೆ ಕೆಲವು ತಿದ್ದುಪಡಿ ತರಲು ಪ್ರಸ್ತಾವ ಮಂಡನೆಗೆ ತಮ್ಮ ಅಪ್ಪಣೆ ಕೋರುತ್ತೇನೆ. ಪ್ರಸ್ತಾವ ಏನೆಂದರೆ, ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮಗಳನ್ನು ಪರಿಶೀಲಿಸಿ, ಸಲಹೆ ನೀಡಲು ವಿಧಾನ ಸಭೆಯ ನಿಯಮಾವಳಿ ಸಮಿತಿಯನ್ನು ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲು ಹಾಗೂ ಈ ಸಮಿತಿಗೆ ಮಾನ್ಯ ಸದಸ್ಯರುಗಳನ್ನು ನೇಮಿಸಲು ಮಾನ್ಯ ಸಭಾಧ್ಯಕ್ಷರವರಿಗೆ ಅಧಿಕಾರ ನೀಡಲು ಈ ಸದನ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಪ್ರಸ್ತಾವ ಏನೆಂದರೆ, ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳನ್ನು ಪರಿಶೀಲಿಸಿ, ಸಲಹೆ ನೀಡಲು ವಿಧಾನ ಸಭೆಯ ನಿಯಮಾವಳಿಯ ಸಮಿತಿಯನ್ನು ರಚಿಸುವಂತೆ ಕೋರಿರುವ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.
ವರದಿಯನ್ನೊಪ್ಪಿಸುವುದು

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು 2004–05 ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪ

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ

ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯ. ತಮಗೆ ನಾನು ಮನವರಿಕೆ ಮಾಡುವ ಪ್ರಯತ್ನ ಮಾಡುತ್ತೇನೆ, ತೀರ್ಮಾನ ತಾವು ಹೇಳಬೇಕು. ಬಳ್ಳಾರಿ ನಗರ ಸಭೆಗೆ ಜೂನ್ 2001 ಕ್ಕೆ ಅವರು ಅಧಿಕಾರಕ್ಕೆ ಬಂದರು. ಜೂನ್ 2006 ರವರೆಗೆ ಅವರ ಅವಧಿ ಇದೆ. ಚುನಾಯಿತ ನಗರ ಸಭೆ ಅಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒಂದು ಮಹಾನಗರ ಪಾಲಿಕೆ ಮಾಡಬೇಕೆನ್ನುವ ಒಂದು ಪ್ರಸ್ತಾವನೆ ಬಂತು. ಅದಕ್ಕೆ ಯಾರ ವಿರೋಧವೂ ಇಲ್ಲ. ಸರ್ವಾನುಮತದಿಂದ ಮಹಾನಗರ ಪಾಲಿಕೆ ಆಗುವವರೆವಿಗೂ ಈಗಿರುವ ಚುನಾಯಿತ ಸದಸ್ಯರನ್ನು ಮುಂದುವರಿಯುವುದಕ್ಕೆ ಅವಕಾಶ ಕೊಡಬೇಕೆಂದು ಅವರು ಒಪ್ಪಿಗೆ ಕೊಟ್ಟಿದ್ದಕ್ಕೂ ಎರಡು ಮಾತಿಲ್ಲ. ಈಗ ದಿಢೀರ್ ಆಗಿ 28-03-05 ನಿನ್ನೆ ದಿವಸ, ಇದನ್ನು ಮಹಾ ನಗರ ಪಾಲಿಕೆಯನ್ನಾಗಿ ನೇಮಕ ಮಾಡಿ, ಚುನಾಯಿತ ಸದಸ್ಯರ ಅಧಿಕಾರವನ್ನು ಕಿತ್ತು ಹಾಕಿದ್ದಾರೆ. ನನ್ನ ಪಾಯಿಂಟ್ ಏನೆಂದರೆ, ಈ ರಾಜ್ಯದಲ್ಲಿ ತುಮಕೂರು ಸೇರಿದಂತೆ ಅನೇಕ ನಗರ ಸಭೆಗಳನ್ನು ಮಹಾ ನಗರ ಸಭೆಗಳನ್ನಾಗಿ ಮಾಡಬೇಕು ಎನ್ನುವ ವಿಚಾರ ನಿಮ್ಮಲ್ಲಿ ಇದೆ. ಅವರೆಲ್ಲರ ಸಲಹೆಯನ್ನು ತೆಗೆದುಕೊಳ್ಳುತ್ತಿದ್ದೀರಿ. ಹೀಗಿರುವಾಗ ಚುನಾಯಿತ ಸದಸ್ಯರ ಅವಧಿ 2006 ಜೂನ್‌ವರೆಗೆ ಇರಬೇಕಾದರೆ, ಅಕಸ್ಮಾತ್ ನೀವು ಇದನ್ನು ಮಹಾನಗರ ಪಾಲಿಕೆ ಮಾಡಬೇಕೆನ್ನುವ ತೀರ್ಮಾನ ತೆಗೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಡಿ ಲಿಮಿಟೇಷನ್ ಮಾಡುವುದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅವಕಾಶ ಕೊಡಿ ಅವರ ಪಾಡಿಗೆ ಅವರು ಪ್ರೋಸೆಸ್ ಮಾಡಲಿ. ಈ ಚುನಾಯಿತ ಪ್ರತಿನಿಧಿಗಳು ಯಾರು ಇದ್ದಾರೆ ಅವರನ್ನು ಅವರವರ ಅವಧಿವರೆಗೆ ಮುಂದುವರಿಸಲಿಕ್ಕೆ ಏನು ತೊಂದರೆ ? ಈ ಹಿಂದೆ ಶಿವಮೊಗ್ಗ – ಭದ್ರಾವತಿ ಸೇರಿ ಮಹಾನಗರ ಸಭೆ ಮಾಡಿದಾಗ ಹಾಗೂ ಬೇರೆ ಬೇರೆ ಸಂದರ್ಭದಲ್ಲಿ, ಅಲ್ಲಿದ್ದಂಥ ಸದಸ್ಯರನ್ನು ಮುಂದುವರೆಸುವ ತೀರ್ಮಾನವನ್ನು ಹಿಂದೆ ಇದ್ದಂಥ ಸರ್ಕಾರಗಳು ತೆಗೆದುಕೊಂಡಿವೆ. ಈಗ ನನ್ನ ಒತ್ತಾಯ ಒಂದೇ, ಇವತ್ತೇನು 28-3-2005 ರಂದು ನೋಟಿಫಿಕೇಷನ್ ಹೊರಡಿಸಿ ಕೊನೆಯ ಪ್ಯಾರಾ ಏನು ಇದೆ.

"Therefore in exercise of the power conferred by Section 500 of the Karnataka Municipal corporation Act - 1976, the Government hereby appoints the Deputy commissioner. Bellary as Administrator to perform the duties and functions of the city corporation of Bellary till the elections are complete and the corporation duties constituted."

ಎಂದು ತಾವು ಆದೇಶ ಮಾಡಿದಿರಿ, ನನ್ನದೇನೂ ಒತ್ತಾಯ ಎಂದರೆ, ತಾವು

ಕಾರ್ಪೋರೇಷನ್ ಮಾಡಿ, ಜಿಲ್ಲಾಧಿಕಾರಿಗಳಿಗೆ ಡಿ ಲಿಮಿಟಿಷನ್ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಡಿ, ಅಲ್ಲಿಯವರೆಗೆ ಈಗಿರುವ ಆಡಳಿತ ವ್ಯವಸ್ಥೆ ಏನು ಇದೆ ಅವರು ಇರುವುದರಿಂದ ಅವರನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಿ. ಈ ಆರ್ಡರ್ ಅನ್ನು ಕ್ಯಾನ್ಸಲ್ ಮಾಡಿ ಅವರನ್ನು ಮುಂದುವರೆಸುವುದಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ, ಅಕ್ಕಪಕ್ಕದ ಬೇರೆ ಬೇರೆ ಜಿಲ್ಲೆಗಳ ಪ್ರಪೋಸಲ್ ಇತ್ತು. ಉದಾಹರಣೆಗೆ ತುಮಕೂರು, ಅದನ್ನು ನೀವು ಮುಂದೂಡಿ. ಅಲ್ಲಿ ನೀವು ಇನ್ನು ತೀರ್ಮಾನ ತೆಗೆದುಕೊಂಡಿಲ್ಲ. ಅಲ್ಲಿ ಇವತ್ತು ಸುಮಾರು 8–10 ಸಾವಿರ ಜನ ಸೇರಿದ್ದಾರೆ. ಈವತ್ತು ಅಲ್ಲಿ ಬಿಜೆಪಿ ಅಧಿಕಾರದಲ್ಲಿದೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಅವಧಿಗೆ ಮುನ್ನ ಆ ಅಧಿಕಾರವನ್ನು ಮೊಟಕುಗೊಳಿಸಿ ಈ ರೀತಿ ನೋಟಿಸ್ ಇಶ್ಯೂ ಮಾಡಿರುವುದು, ಇದು ಪ್ರಜಾತಂತ್ರದ ವ್ಯವಸ್ಥೆಗೆ ಮಾರಕವಾದುದು. ಇದು ಯಾರಿಗೂ ಗೌರವ ತರುವ ಸಂಗತಿಯಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದು ಏನೆಂದರೆ, ದಯಮಾಡಿ ಕಾರ್ಪೊರೇಷನ್ ಮಾಡಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಅಲ್ಲಿ ಬೋರ್ಡ್ ಸರ್ವಾನುಮತದ ಒಪ್ಪಿಗೆ ಕೊಟ್ಟಿದೆ. ಅಲ್ಲಿಯವರೆಗೆ ಇರುವ ಬೋರ್ಡ್‌ನ್ನು ಅವಧಿ ಇರುವುದರಿಂದ ಇರುವ ಎಲೆಕ್ಟೆಟ್ ಬಾಡಿಯನ್ನು ತಾವು ಮುಂದುವರಿಸಬೇಕು. ಈ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯ. ತಮ್ಮ ಉತ್ತರ ನೋಡಿಕೊಂಡು, ನೀವು ಹೇಗೆ ನಡೆದುಕೊಳ್ಳುತ್ತೀರಾ ? ಸರ್ಕಾರ ಇಂಥಾ ಸಂದರ್ಭದಲ್ಲಿ ಹೇಗೆ ನಮ್ಮನ್ನು ನಡೆಸಿಕೊಳ್ಳುತ್ತದೆ, ಏಕೆಂದರೆ, ನಾವು 70 ಜನ ಶಾಸಕರು ಇದ್ದೇವೆ. ಒಂದು ಪ್ರತಿಪಕ್ಷವಾಗಿ ಕೆಲಸ ಮಾಡುತ್ತಿದ್ದೇವೆ, ಸರ್ಕಾರ ನಾವು ಒಟ್ಟಿಗೆ ಸೇರಿ ಈ ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡುತ್ತಿರುವಂಥ ಸಂದರ್ಭದಲ್ಲಿ ನೀವು ಈಗ ಏನು ಮಾಡುತ್ತೀರಿ ಎಂಬುದನ್ನು ನಾವು ಕಾದು ನೋಡುತ್ತೇವೆ. ಹಿಂದೆನೂ ಅನೇಕ ಸಂದರ್ಭದಲ್ಲಿ ಕಾರ್ಪೊರೇಷನ್ ಮಾಡಿದಂಥ ಕಾಲದಲ್ಲಿ ಅಲ್ಲಿದ್ದಂಥ ಚುನಾಯಿತ ಪ್ರತಿನಿಧಿಗಳನ್ನು ಆ ಕಾರ್ಪೊರೇಷನ್ ಎಂದು ಪರಿವರ್ತನೆ ಮಾಡಿದ ಮೇಲೆ, ಅದೇ ಸದಸ್ಯರನ್ನು ಮುಂದುವರೆಸಿ ಚುನಾವಣೆ ಮಾಡಿದಂಥ ಅನೇಕ ಉದಾಹರಣೆಗೆಳು ಇವೆ. ಇಲ್ಲಿ ನಾನು ವಿನಂತಿ ಹಾಗೂ ಒತ್ತಾಯ ಮಾಡುತ್ತೇನೆ. ದಯ ಮಾಡಿ ಅಲ್ಲಿರುವಂಥ ನಗರ ಸಭೆ ಸದಸ್ಯರನ್ನು ಕಾರ್ಪೊರೇಷನ್ ಆಗಿ ಚುನಾವಣೆಯಾಗುವವರೆವಿಗೂ ಅವರನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಅಲ್ಲಿ ಚುನಾಯಿತ ಪ್ರತಿನಿಧಿಗಳು ಇರುವುದು ಗೊತ್ತಿದೆ. ಭಾರತೀಯ ಜನತಾ ಪಕ್ಷ ಎನ್ನುವ ಒಂದೇ ಒಂದು ಕಾರಣಕ್ಕೆ ಆ ಒಂದು

ಕಾರ್ಪೋರೇಷನ್‌ನನ್ನು ಇದ್ದಕ್ಕಿದ್ದ ಹಾಗೆ ಅದನ್ನು ರದ್ದು ಮಾಡಿ, ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಇದು ಪ್ರಜಾಪ್ರಭುತ್ವದ ಕಗ್ಗೊಲೆ ಅಲ್ಲವೆ ? ತಾವು ಆಲೋಚನೆ ಮಾಡಿ. ಏಕೆಂದರೆ, ಜನರಿಂದ ಆಯ್ಕೆಯಾದಂಥ ಒಂದು ನಗರ ಸಭೆಯನ್ನು ಈ ರೀತಿ ಅನ್ಯಾಯ ಮಾಡಿರುವುದು ನಿಜಕ್ಕೂ ಇದು ಶೋಭೆ ತರುವಂಥದ್ದಲ್ಲ.

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ ಮಾಡಿದ್ದಾರೆ. ಅದು ಎಲ್ಲಾ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಂ. ಎಸ್. ಸೋಮಲಿಂಗಪ್ಪ : ಬಳ್ಳಾರಿಗೆ ಒಂದು ಕಾನೂನು, ಶಿವಮೊಗ್ಗಕ್ಕೆ ಒಂದು ಕಾನೂನು, ತುಮಕೂರಿಗೆ ಒಂದು ಕಾನೂನು ಇದೆಯೇ ?

ಶ್ರೀ ಬಿ.ಶ್ರೀರಾಮುಲು : ಒಂದು ಪಕ್ಷ ಮಾಡುವ ಹಾಗೆ ಇದ್ದರೆ ಎಲ್ಲಾ ಮಾಡಬೇಕಾಗಿತ್ತು. 2004 ರಲ್ಲಿ ಮುನಿಸಿಪಾಲಿಟಿಯನ್ನು ಅಪ್ ಗ್ರೇಡೆಡ್ ಆಗಿ ಮಾಡಿದರು. ಮಾಡಿದ ಮೇಲೆ ಆರು ತಿಂಗಳ ನಂತರ ನಿನ್ನೆ ಸರ್ಕಾರದಿಂದ ಮುನಿಸಿಪಾಲಿಟಿ ಡಿಜಾಲ್ವ್ ಎಂದು ಒಂದು ಪತ್ರ ಬಂದಿದೆ. ಆರು ತಿಂಗಳಿನಿಂದ ಇವತ್ತಿನವರೆವಿಗೂ ವಾರ್ಡ್ ಬೈಫರಕೇಷನ್ ಆಗಿಲ್ಲ. ವಾರ್ಡ್ ಬೈಫರ್‌ಕೇಷನ್ ಆಗಿಲ್ಲದಿದ್ದರೂ ಡಿಜಾಲ್ವ್ ಮಾಡುವುದಕ್ಕೆ ಏನು ಕಾರಣ ? ಶಿವಮೊಗ್ಗಕ್ಕೆ ಒಂದು ಕಾನೂನು, ಬೇರೆ ಊರಿಗೆ ಕಾನೂನು, ನಮ್ಮ ಬಳ್ಳಾರಿಗೆ ಒಂದು ಕಾನೂನು ಇದೆಯೆ. ಕಾಂಗ್ರೆಸ್ ಪಕ್ಷದ ಭದ್ರ ಕೋಟೆಯಾಗಿದ್ದಂಥ ಬಳ್ಳಾರಿಯಲ್ಲಿ ಬಿಜೆಪಿ ಪಕ್ಷ ಆಡಳಿತಕ್ಕೆ ಬಂದಿದೆ ಎಂದು ಒಂದೇ ಒಂದು ಕುತಂತ್ರದಿಂದ ಸಮ್ಮಿಶ್ರ ಸರಕಾರ ಬಳ್ಳಾರಿಗೆ ಅನ್ಯಾಯ ಮಾಡುತ್ತಿದೆ ಇಂಥ ಅನ್ಯಾಯ ಮಾಡಿದರೂ ಅಲ್ಲಿ ಸಾರ್ವಜನಿಕರು ಹೇಗೆ ಜೀವನ ಮಾಡಲಿಕ್ಕೆ ಆಗುತ್ತದೆ? ಈ ರೀತಿಯಾಗಿ ಅನ್ಯಾಯ ಮಾಡುತ್ತಿದ್ದರೆ ಅಲ್ಲಿರತಕ್ಕಂಥ ಸಾರ್ವಜನಿಕರು ಹೇಗೆ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಇವತ್ತಿನ ದಿವಸ ಬಳ್ಳಾರಿ ಅಭಿವೃದ್ಧಿ ಚೆನ್ನಾಗಿ ಆಗಿದೆ. ಮತ್ತೆ ಅಲ್ಲಿ ಕುಡಿಯುವ ನೀರಿನ ಸೌಕರ್ಯ ಕೂಡ ಚೆನ್ನಾಗಿ ಆಗಿದೆ. ಇವತ್ತಿನ ದಿವಸ ರಾಜ್ಯದಲ್ಲಿ ಎಲ್ಲಿಯೂ ಕೂಡ ನಡೆಯದಂಥ ಅಭಿವೃದ್ಧಿ ಕೆಲಸಗಳು ಬಳ್ಳಾರಿಯಲ್ಲಿ ನಡೆದಿದೆ. ಬಳ್ಳಾರಿ ಜಿಲ್ಲೆ ಹಿಂದುಳಿದ ಜಿಲ್ಲೆಯಾಗಿದೆ. ಆದರೆ ರಾಜ್ಯ ಸರ್ಕಾರ ಬಳ್ಳಾರಿಗೆ ಅನ್ಯಾಯ ಮಾಡುತ್ತಿದೆ. ಇವತ್ತಿನ ದಿವಸ ಬಿಜೆಪಿಯವರು ಅಲ್ಲಿ ಹೆಚ್ಚಾಗಿದ್ದಾರೆಂದು, ರಾಜ್ಯ ಸರ್ಕಾರ ಮನಸ್ಸಿನಲ್ಲಿಟ್ಟುಕೊಂಡು ಅಲ್ಲಿರತಕ್ಕಂಥ ಬಿಜೆಪಿಯವರನ್ನು ತುಳಿಯಬೇಕೆಂದು ಮತ್ತು ಅವರು ಮೇಲಕ್ಕೆ ಬರಬಾರದೆಂಬ ಕುತಂತ್ರದ ರಾಜಕೀಯವನ್ನು ಅಲ್ಲಿ ನಡೆಸುತ್ತಿದ್ದಾರೆ. ಸರ್ಕಾರ ಅಲ್ಲಿ ಮಾಡಿರತಕ್ಕಂಥ

ಆದೇಶವನ್ನು ತಕ್ಷಣವೇ ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಳ್ಳಾರಿ ಜಿಲ್ಲೆಯ ಶಾಸಕರು ಮತ್ತು ಎಂ. ಪಿ. ಯವರು ಮಾನ್ಯ ಮುಖ್ಯಮಂತ್ರಿಗಳ ಮನೆ ಮುಂದೆ ನಿರಶನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಈಶ್ವರಪ್ಪನವರು ಹಾಗೂ ಬಳ್ಳಾರಿ ಶಾಸಕರಾಗಿರತಕ್ಕಂಥ ಮಾನ್ಯ ಶ್ರೀರಾಮುಲುರವರು ಈ ವಿಚಾರವನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಖಾತೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು ಹೊಂದಿರುತ್ತಾರೆ. ಆದ್ದರಿಂದ, ಅವರ ಜೊತೆ ಈ ವಿಷಯದ ಬಗ್ಗೆ ಚರ್ಚೆ ಮಡಿ ನಾಳೆ ದಿವಸ ಸಾಧ್ಯವಾದರೆ ಸದರಿ ವಿಷಯಕ್ಕೆ ಸಂಬಂಧಪಟ್ಟಂಥ ಉತ್ತರವನ್ನು ಒದಗಿಸಲಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ನಾವು ಉತ್ತರ ತೆಗೆದುಕೊಂಡು ಏನು ಮಾಡಬೇಕು. ಈಗ ಮಾಡಿರತಕ್ಕಂಥ ಆದೇಶವನ್ನು ಮೊದಲು ರದ್ದು ಮಾಡಬೇಕು. ಚುನಾಯಿತ ಪ್ರತಿನಿಧಿಗಳಿಗೆ ಈ ರೀತಿಯಾಗಿ ಅನ್ಯಾಯ ಮಾಡುತ್ತಿದ್ದೀರಿ. ಇದಕ್ಕೆ ಉತ್ತರ ಏಕೆ ಬೇಕು ? ಇವತ್ತಿನ ದಿವಸ ಸುಮಾರು ಹತ್ತಾರು ಸಾವಿರ ಜನ ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ.

ಅಧ್ಯಕ್ಷರು :– ಮಾನ್ಯ ಈಶ್ವರಪ್ಪನವರೆ, ಇದು ಗಮನ ಸೆಳೆಯುವ ಸೂಚನೆ

ಶ್ರೀ ಕೆ.ಎನ್. ಈಶ್ವರಪ್ಪ:– ತಾವು ಏನಾದರೂ ಮಾಡಿ ಸ್ವಾಮಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಅಧ್ಯಕ್ಷರೆ, ಅಲ್ಲಿದ್ದಂಥ ಒಂದು ಎಲೆಕ್ಟೆಡ್ ಬಾಡಿಯ ಮೇಲೆ ಕನಿಕರವಿಲ್ಲದ ರೀತಿಯಲ್ಲಿ ಅಂದರೆ, ಪ್ರಜಾಪ್ರಭುತ್ವ ಕಗ್ಗೊಲೆ ಎನ್ನುವತಕ್ಕಂಥ ರೀತಿಯಲ್ಲಿ ಇವರು ಅಲ್ಲಿ ಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಅಲ್ಲಿ ಬಿ. ಜೆ.ಪಿ. ಪಕ್ಷದ ಒಂದು ಅಧಿಕಾರ ಇದೆ ಎನ್ನುತಕ್ಕಂಥ ದೃಷ್ಟಿ ಕೋನದಿಂದ ಇದನ್ನು ರದ್ದು ಮಾಡಿದ್ದಾರೆ. ಇದರಲ್ಲಿ ಬೇರೆ ಉದ್ದೇಶ ಏನು ಇಲ್ಲ. ಇದನ್ನು ನಿಜವಾಗಿಯೂ ಕೂಡ ದುರುದ್ದೇಶ ಇಟ್ಟುಕೊಂಡು ಮಾಡಿದ್ದಾರೆ. ಇಲ್ಲಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಹೆಚ್. ಕೆ. ಪಾಟೀಲ್‌ರವರು ಈ ಸಮಸ್ಯೆಯನ್ನು ಪರಿಹಾರ

ಮಾಡಬಹುದು. ಅಂದರೆ, ಈಗ ಮಾಡಿರತಕ್ಕಂಥ ಆದೇಶವನ್ನು ತಕ್ಷಣವೇ ರದ್ದು ಮಾಡಬೇಕು.

ಶ್ರೀ ಬಿ. ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಎಂ. ಪಿ. ಪ್ರಕಾಶ್‌ರವರು ಹಾಗೂ ಮಾನ್ಯ ಹೆಚ್. ಕೆ. ಪಾಟೀಲ್‌ರವರು ಇಲ್ಲಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ರಾಜ್ಯದಲ್ಲಿ ಹಿಂದೆ ಈ ರೀತಿಯಾದ ಅಂದರೆ, ನಗರ ಸಭೆ ಇರತಕ್ಕಂಥದನ್ನು ಕಾರ್ಪೋರೇಷನ್ ಆಗಿ ಪರಿವರ್ತನೆ ಮಾಡಿದಾಗ ನಾವೇನು ನಿಯಮಗಳನ್ನು ಅನುಸರಿಸಿದ್ದೇವೆಯೋ ಅದನ್ನು ಇಲ್ಲಿ ಮಾಡಬೇಕಾಗುತ್ತದೆ. ಉದಾಹರಣೆ ಹೇಳುವುದಾದರೆ, ಶಿವಮೊಗ್ಗ ಮತ್ತು ಭದ್ರಾವತಿ ಕಾರ್ಪೋರೇಷನ್ ಆಯಿತು. ಆ ಸಂದರ್ಭದಲ್ಲಿದ್ದಂಥ ಎಲೆಕ್ಟೆಡ್ ಬಾಡಿಯನೆ ಆ ಸಂದರ್ಭದಲ್ಲಿಯೂ ಕೂಡ ಮುಂದುವರಿಸಲಾಯಿತು. ಈ ರೀತಿಯಾದ ಉದಾಹರಣೆಗಳು ಹಿಂದೆ ಅನೇಕ ಸಂದರ್ಭದಲ್ಲಿ ನಡೆದಿವೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿರುವ ಅನೇಕ ನಗರ ಸಭೆಗಳನ್ನು ಕಾರ್ಪೋರೇಷನ್ ಆಗಿ ಪರಿವರ್ತನೆ ಮಾಡಬೇಕೆಂದು ತಾವು ಇದ್ದೀರಿ. ಇವತ್ತಿನ ದಿವಸ ಎಲ್ಲಿ ಕಾಂಗ್ರೆಸ್ ಅಧಿಕಾರ ನಡೆಸುತ್ತಿದೆ ಅಂಥವುಗಳನ್ನು ಟ್ಚ್ ಮಾಡಿಲ್ಲ. ಈಗ ಇದನ್ನು ಕಾರ್ಪೋರೇಷನ್ ಮಾಡಿರತಕ್ಕಂಥದ್ದರಿಂದ ನಮಗೇನು ವಿರೋಧವಿಲ್ಲ ಎಂದು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಇಡೀ ನಗರ ಸಭೆಯೇ ಒಪ್ಪಿಗೆ ಕೊಟ್ಟಿದೆ. ಆದರೆ, ಅಲ್ಲಿ ಕಾರ್ಪೋರೇಷನ್ ಚುನಾವಣೆ ಆಗುವವರೆಗೂ ಡಿ ಲಿಮಿಟೇಶನ್ ಮತ್ತು ಇತರೇ ಕೆಲಸಗಳನ್ನು ಡಿ. ಸಿ. ಯವರು ಮಾಡುತ್ತಾರೆ. ಚುನಾವಣೆ ನಡೆಯುವವರೆಗೂ ಅಲ್ಲಿರತಕ್ಕಂಥ ಎಲೆಕ್ಟೆಡ್ ಬಾಡಿಯನ್ನೆ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಳ್ಳುತ್ತೇವೆ. ಈಗ ಡಿ. ಸಿ. ಅಡ್ಮಿನಿಸ್ಟ್ರೇಷನ್ ಆಫೀಸರ್ ಆಗಿ ಆದೇಶ ಮಾಡಿರತಕ್ಕಂಥದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ ಎನ್ನತಕ್ಕಂಥದನ್ನು ತಾವು ಈ ಸಂದರ್ಭದಲ್ಲಿ ದಯವಿಟ್ಟು ಹೇಳಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ ನೀವು ರಾಜಕೀಯ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಮಾಡಿದ್ದಾರೆಂದು ನಾವು ತಿಳಿದುಕೊಳ್ಳ ಬೇಕೆ ? ಇವತ್ತಿನ ದಿವಸ ಬಳ್ಳಾರಿ ಅತ್ಯಂತ ಸೂಕ್ಷ್ಮವಾದ ಪ್ರದೇಶವಾಗಿದೆ. ಆದ್ದರಿಂದ, ಅಲ್ಲಿ ಅನಗತ್ಯವಾದ ವಾತಾವರಣ ಅಥವಾ ಗೊಂದಲವನ್ನು ಏಕೆ ನಿರ್ಮಾಣ ಮಾಡಬೇಕು ?

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಅದು ಒಳ್ಳೆಯ ಆದರ್ಶವಾದ ಸಂಸ್ಥೆಯಾಗಿದೆ. ಅಲ್ಲಿರತಕ್ಕಂಥ ಅಧಿಕಾರ ವರ್ಗ ಒಳ್ಳೆಯ ಕೆಲಸವನ್ನು ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ, ಇದನ್ನು ಯಾವ ಉದ್ದೇಶಕ್ಕಾಗಿ

ರದ್ದು ಮಾಡಿದ್ದೀರಿ ? ರಾಜಕೀಯ ಉದ್ದೇಶವಿಟ್ಟುಕೊಂಡು ಅದನ್ನು ರದ್ದು ಮಾಡತಕ್ಕಂಥದು ಒಳ್ಳೆಯ ಸೂಚನೆಯಲ್ಲ. ಆದ್ದರಿಂದ, ಸರ್ಕಾರ ಕೂಡಲೇ ಇದರ ಬಗ್ಗೆ ಪರಿಶೀಲನೆ ಮಾಡಿ ತಕ್ಷಣವೇ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅಭಿವೃದ್ಧಿ ಕೆಲಸ ಅಲ್ಲಿ ಆಗುತ್ತಿಲ್ಲವೆಂಬ ಆರೋಪ ಏನಿಲ್ಲ.

ಶ್ರೀ. ಎಂ. ಎಸ್. ಸೋಮಲಿಂಗಪ್ಪ:– ಮಾನ್ಯ ಅಧ್ಯಕ್ಷರೆ, ಬಳ್ಳಾರಿ ನಗರ ಸಭೆ ಈಗಾಗಲೇ 100 ಕ್ಕೆ 100 ರಷ್ಟು ಕೆಲಸ ಮಾಡುತ್ತಿದೆ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಮತ್ತೇನಾದರೂ ಹೇಳುವುದು ಇದೆಯೇ?

(ಗೊಂದಲ)

ಶ್ರೀ ಎಂ. ಎಸ್. ಸೋಮಲಿಂಗಪ್ಪ :– ಅಲ್ಲಿರತಕ್ಕಂಥ ನಗರಸಭೆ ಉತ್ತಮವಾದ ಕೆಲಸ ಮಾಡಿದೆ.

ಅಧ್ಯಕ್ಷರು : ಎಲ್ಲರೂ ಈ ರೀತಿಯಾಗಿ ಎದ್ದು ನಿಂತುಕೊಂಡರೆ ಹೇಗೆ ? ನಿಮ್ಮ ನಾಯಕರು ಮಾತನಾಡುವಾಗ ತಾವೆಲ್ಲರೂ ಕುಳಿತುಕೊಳ್ಳಬೇಕು. ನಿಮಗೆ ಶಿಸ್ತು ಇಲ್ಲವೆಂದು ಕಾಣುತ್ತದೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಮಹಾನಗರ ಸಭೆಗೆ ಡಿ–ಲಿಮಿಟೇಶನ್ ಮಾಡಬೇಕು ಮತ್ತು ಅಲ್ಲಿ ವಾರ್ಡ್‌ಗಳನ್ನು ಹಂಚತಕ್ಕಂಥ ಕೆಲಸ ಮಾಡಬೇಕು. ಹಾಗೆಯೇ ಎಷ್ಟೆಷ್ಟು ಜನಸಂಖ್ಯೆ ಇರಬೇಕೆಂಬುದು ಮತ್ತು ಎಷ್ಟು ಜನ ಸದಸ್ಯರು ಇರಬೇಕೆಂಬ ಯಾವುದೇ ಕೆಲಸ ಅಲ್ಲಿ ಆಗಿಲ್ಲ. ಆದ್ದರಿಂದ, ಇವೆಲ್ಲವನ್ನು ಅಲ್ಲಿ ಮಾಡಿದ ಮೇಲೆ ಚುನಾವಣೆ ಮಾಡಿ. ಆದರೆ, ಅಲ್ಲಿಯವರೆಗೆಯಾದರು ಇರತಕ್ಕಂಥ ಎಲೆಕ್ಟೆಡ್ ಬಾಡಿಯನ್ನು ಮುಂದುವರಿಸಿ. ಅಲ್ಲಿರತಕ್ಕಂಥ ಎಲೆಕ್ಟೆಡ್ ಬಾಡಿಯನ್ನು ಇದ್ದಕ್ಕಿದ್ದ ಹಾಗೆ ಡಿಸಾಲ್ವ್ ಮಾಡಿದರೆ ಇದಕ್ಕೆ ಅರ್ಥ ಏನಿದೆ ? ನೀವೆಲ್ಲಾ ಸೇರಿಕೊಂಡು ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿದ್ದೀರಿ.

(ಈ ಹಂತದಲ್ಲಿ ಮಾನ್ಯ ಶ್ರೀ ರಾಮುಲು ಮತ್ತು ಶ್ರೀ ಎಂ. ಎಸ್. ಸೋಮಲಿಂಗಪ್ಪನವರು ಹಾಗೂ ಶ್ರೀ ಎ. ಪಾಪರೆಡ್ಡಿಯವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಹಿಂದೆ ಇದ್ದಂಥ ಆಡಳಿತಾ ಅವಧಿಯಲ್ಲಿ ಆಗಿರತಕ್ಕಂಥ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಹಿಂದೆ ಇದ್ದಂಥ ಗೂಂಡಾಗಿರಿಯನ್ನು ತಾವು ಗಮನಿಸಬೇಕು.

ಅಧ್ಯಕ್ಷರು :– ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಕಡೆಯಿಂದ ಏನಾದರೂ ರಿಯಾಕ್ಷನ್ಸ್ ಇದೆಯೆ?

ಶ್ರೀ ಕೆ. ಎಸ್. ಈಶ್ವರಪ್ಪ:– ಬಳ್ಳಾರಿ ಜಿಲ್ಲೆಯ ಜಿಲ್ಲಾ ಮಂತ್ರಿಗಳಾಗಿರತಕ್ಕಂಥ ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲಿಯೆ ಇದ್ದಾರೆ. ಆದ್ದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಹಿಂದೆ ಇದ್ದಂಥ ಆಡಳಿತಾವಧಿಯಲ್ಲಿ ಅಂದರೆ, ಈಗ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರುವುದಕ್ಕಿಂಥ ಮುಂಚೆ ಏನು ಅಭಿವೃದ್ಧಿ ಕಾರ್ಯಗಳು ಆಗಿತ್ತೆಂಬುದರ ಬಗ್ಗೆ ಮತ್ತು ಈಗ ಇರತಕ್ಕಂಥವರು ಏನೇನು ಹೊಸದಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಇಲ್ಲಿ ಹಿಂದೆ ಗೂಂಡಾಗಿರಿ ಸಾಕಷ್ಟು ನಡೆಯುತ್ತಿತ್ತು. ಆದರೆ, ಈಗ ಸಾಕಷ್ಟು ಕಡಿಮೆಯಾಗಿದೆ. ಇದನ್ನು ತಾವು ಗಮನಿಸಬೇಕು. ನಿಜವಾಗಿ ಹೇಳಬೇಕಾದರೆ ಅಲ್ಲಿರತಕ್ಕಂಥ ನಗರಸಭೆಯವರಿಗೆ ಹೆಚ್ಚಿನ ಅನುದಾನ ಕೊಡಬೇಕಾಗಿತ್ತು. ಆದರೆ, ತಾವು ಅನುದಾನ ಕೊಡುವುದನ್ನು ಬಿಟ್ಟು ಇದನ್ನು ರದ್ದು ಮಾಡುವುದು ಸರಿಯೆ? ಇದರ ಬಗ್ಗೆ ತಾವು ದಯವಿಟ್ಟು ಉತ್ತರ ಕೊಡಿಸಬೇಕು.

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರೆ, ಇದರ ಬಗ್ಗೆ ದಯವಿಟ್ಟು ಚರ್ಚೆ ಬೇಡ. ಈಗಾಗಲೇ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಆದ್ದರಿಂದ ಈ ರೀತಿ ನಡೆದುಕೊಂಡರೆ ಹೇಗೆ?

ಶ್ರೀವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವದ ವ್ಯವಸ್ಥೆಗೆ ಇದೊಂದು ತಾಜಾ ಉದಾಹರಣೆಯಾಗಿದೆ. ಸರ್ಕಾರ ಈ ರೀತಿ ಮಾಡಬಾರದು. ಎಲಿಕ್ಟೆಡ್ ರೆಪ್ರಜೆಂಟೆಟೀವ್ ಇರತಕ್ಕಂತ ಒಂದು ಬಾಡಿಯನ್ನು ಈ ರೀತಿಯಾಗಿ ತೆಗೆದು ಹಾಕುವುದು ಎಷ್ಟರಮಟ್ಟಿಗೆ ಸರಿ?

ಅಧ್ಯಕ್ಷರು:– ಸರ್ಕಾರದ ಪರವಾಗಿ ಯಾರಾದರು ರಿಯಾಕ್ಟ್ ಮಾಡುತ್ತೀರಾ?

ಶ್ರೀ ಅರಗಜ್ಞಾನೇಂದ್ರ:– ಈಗ ಅವರು ಮಾಡುವುದನ್ನೆಲ್ಲಾ ಮಾಡಿ ಈಗ ಸುಮ್ಮನೆ ಕುಳಿತುಕೊಂಡು ಬಿಟ್ಟಿದ್ದಾರೆ. ಇದೊಂದು ಒಳ್ಳೆಯ ಕತೆಯಾಯಿತಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇದರ ಬಗ್ಗೆ ಹೇಳಿದ್ದಾರೆ. ಆದರೆ, ಈ ಸಂದರ್ಭದಲ್ಲಿ

ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಮತ್ತು ಮಾನ್ಯ ಈಶ್ವರಪ್ಪನವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ಅದರ ಜೊತೆ ಈ ವಿಷಯವನ್ನು ಚರ್ಚಿಸಿ ಈ ಸದನಕ್ಕೆ ಉತ್ತರ ನೀಡಲಾಗುತ್ತದೆ. ಈಗಲೇ ಅಥವಾ ಒಂದೇ ದಿವಸದಲ್ಲಿ ಆಗಬೇಕೆಂದರೆ ಹೇಗೇ? ಸರ್ಕಾರ ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ.

(ಈ ಹಂತದಲ್ಲಿ ಸದನದ ಬಾವಿಯೊಳಗೆ ಇದ್ದಂಥ ಮಾನ್ಯ ಶ್ರೀರಾಮುಲುವರು ಮಾತನಾಡುತ್ತಿದ್ದರು)

ಅಧ್ಯಕ್ಷರು:– ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುವಂತಿಲ್ಲ. ಒಂದು ವೇಳೆ ನೀವು ಮಾತನಾಡುವುದಾರೆ ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಬೇಕು. ದಯವಿಟ್ಟು ಇಲ್ಲಿ ತಾವು ಮಾತನಾಡಬಾರದು.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು:– ಇಲ್ಲಿಯೂ ಮಾತನಾಡಬಾರದು ಮತ್ತು ಅಲ್ಲಿಯೂ ಕೂಡ ಮಾತನಾಡಬಾರದೆಂದು ನಮ್ಮ ಬಾಯಿಯನ್ನು ಮುಚ್ಚಿಸುತ್ತಿದ್ದಾರೆ.

ಅಧ್ಯಕ್ಷರು:– ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರೆ, ನೀವು ಮನೆಯಲ್ಲಿ ಮಾತನಾಡುವ ರೀತಿಯಲ್ಲಿ ಇಲ್ಲಿ ಮಾತನಾಡುವುದಲ್ಲ. ಸದನದಲ್ಲಿ ಕೆಲವು ಸಂಪ್ರದಾಯಗಳಿವೆ. ಆದ್ದರಿಂದ ನೀವು ಏನು ಮಾತನಾಡುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಇವತ್ತು ಮಧ್ಯಾಹ್ನದ ಒಳಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕಾಂಟ್ಯಾಕ್ಟ್ ಮಾಡಿ ಮಧ್ಯಾಹ್ನದೊಳಗೆ ದಯಮಾಡಿ ಇದಕ್ಕೆ ಉತ್ತರ ಕೊಡಿ. ಈ ರೀತಿ ಮಾಡಿರತಕ್ಕಂಥದು ನಿಮಗೆ ಸರಿ ಇದೆ ಎಂದು ಕಾಣುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಮಾನ್ಯ ಪ್ರಧಾನ ಮಂತ್ರಿಗಳು ಕರೆದಿದ್ದಾರೆ. ಈ ಒಂದು ಸಭೆಯಲ್ಲಿ ನಮ್ಮ ಮುಖ್ಯಮಂತ್ರಿಗಳೂ ಕೂಡ ಇದ್ದಾರೆ. ಅವರನ್ನು ಈಗಲೇ ಕಾಂಟ್ಯಾಕ್ಟ್ ಮಾಡಿ ಎಂದರೆ ಹೇಗೆ? ಇದು ಇವತ್ತೆ ಅಥವಾ 24 ಗಂಟೆಯೊಳಗೆ ಆಗಬೇಕೆಂದು ಏನಿಲ್ಲವಲ್ಲ? ನಾಳೆ ಅಥವಾ ನಾಡಿದು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:– ಅಲ್ಲಿಯವರೆಗೆ ಸರ್ಕಾರ ಮಾಡಿರತಕ್ಕಂಥ ಆದೇಶವನ್ನು ತಡೆ ಹಿಡಿಯಿರಿ. ಈ ಆದೇಶವನ್ನು ನೆನ್ನೆ ದಿವಸ ಅಂದರೆ 28ನೇ ತಾರೀಕು ಹೊರಡಿಸಲಾಗಿದೆ. ಇವತ್ತು 29ನೇ ತಾರೀಕು ಇದರ ಬಗ್ಗೆ ನಾಳೆ ದಿವಸ

ಉತ್ತರ ಕೊಡಿ. ಆದರೆ, ಅಲ್ಲಿಯವರೆಗೆ ಅದನ್ನು ಎಗ್ಜಿಕ್ಯೂಟಿವ್ ಆಗದ ರೀತಿಯಲ್ಲಿ ನೋಡಿಕೊಳ್ಳಿ. ನಾವೇನು ಹೊಸದಾಗಿ ಇದನ್ನು ಕೇಳುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರೆ ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ಹಿಂದಿನಿಂದ ನಡೆದುಕೊಂಡು ಬಂದಿರತಕ್ಕಂಥ ಪ್ರಾಕ್ಟಿಸ್‌ನ್ನು ತಾವು ಗಮನಿಸಬೇಕು. ನಾವೇನು ತಮ್ಮನ್ನು ಹೊಸದಾಗಿ ಏನು ಕೇಳುತ್ತಿಲ್ಲ. ಅಲ್ಲಿ ಬಿಜೆಪಿ ಅಧಿಕಾರದಲ್ಲಿದೆ ಎಂಬ ಒಂದೇ ಒಂದು ಕಾರಣದಿಂದ ಅಲ್ಲಿರತಕ್ಕಂಥವರ ಕತ್ತನ್ನು ಏಕೆ ಹಿಚುಕುತ್ತೀರಿ? ಅಲ್ಲಿ ನಿಮ್ಮವರು ಮತ್ತು ನಮ್ಮವರೂ ಕೂಡ ಚುನಾಯಿತರಾಗಿದ್ದಾರೆ. ಆದರೆ, ನಾವು ಅಲ್ಲಿ ಅಧಿಕಾರದಲ್ಲಿರಬಹುದಷ್ಟೇ.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ಇದು ಎಂಥ ನ್ಯಾಯ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಉಪಮುಖ್ಯಮಂತ್ರಿಗಳು ಹಾಗು ಮಾನ್ಯ ಎಂ.ಪಿ.ಪ್ರಕಾಶರವರು ಅದೇ ಜಿಲ್ಲೆಯವರಾಗಿದ್ದಾರೆ. ಆದ್ದರಿಂದ, ಇವರೆಲ್ಲರೂ ಸೇರಿಕೊಂಡು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಅಧ್ಯಕ್ಷರು:– ಕೆಲವು ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಒಬ್ಬೊಬ್ಬರು ಮಾತನಾಡಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ.ಪ್ರಕಾಶ್‌ರವರು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಅವರೇ ಸ್ಪಷ್ಟವಾದ ಉತ್ತರ ಹೇಳಲಿ?

ಅಧ್ಯಕ್ಷರು:– ಜಿಲ್ಲಾ ಉಸ್ತುವಾರಿ ಸಚಿವರು ಏನು ಮಾಡುವದಕ್ಕೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಾಳೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:–ಮೊದಲು ಸರ್ಕಾರ ಮಾಡಿರತಕ್ಕಂಥ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಲಿ ಬೇಕಾದರೆ ಇದರ ಬಗ್ಗೆ ನಾಳೆ ಉತ್ತರ ಕೊಡುವುದಕ್ಕೆ ನಮ್ಮದೇನು ಅಭ್ಯಂತರವಿಲ್ಲ.

ಅಧ್ಯಕ್ಷರು:– ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಂದ ನಂತರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರ ಹೊರಡಿಸಿರತಕ್ಕಂಥ ಆದೇಶವನ್ನು ಅಲ್ಲಿಯವರೆಗೆ ಸ್ಟೇ ಮಾಡುವುದಕ್ಕೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಅವರು ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡು ನಾವು ಮತ್ತೆ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಇದನ್ನು ಹಿಂದಕ್ಕೆ ತೆಗೆದುಕೊಳ್ಳುವು ವವರೆಗೆ ನಾವೆಲ್ಲಾ ಧರಣಿ ಮಾಡುತ್ತೇವೆ. ಇದು ನಿಜವಾಗಿಯೂ ಕೂಡ ಒಳ್ಳೆಯ ಸೂಚನೆಯಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಇದರಿಂದ ಅಪಮಾನ ಮಾಡಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಇದಕ್ಕೇನು ಮುಖ್ಯಮಂತ್ರಿಗಳು ಬಂದು ಹೇಳಬೇಕಾಗಿಲ್ಲ ಮತ್ತು ಅವರ ಒಪ್ಪಿಗೆ ಕೂಡ ಬೇಕಾಗಿಲ್ಲ. ಆದ್ದರಿಂದ ಇದರ ಬಗ್ಗೆ ಈಗಲೇ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರ ಅವಧಿಯನ್ನು ಜೂನ್ ತಿಂಗಳವರೆಗೆ ಮುಂದುವರಿಸಿದರೆ ಇವರದು ತಲೆ ಏನಾದರೂ ಹೋಗುತ್ತದೆಯೇ?

(ಗೊಂದಲ)

ಅಧ್ಯಕ್ಷರು:– ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ಮುಖ್ಯಮಂತ್ರಿಗಳನ್ನು ಸಂಪರ್ಕಿಸುತ್ತಾರೆ. ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ನಾಳೆ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:– ಅಲ್ಲಿಯವರೆಗೆ ತಡೆ ಹಿಡಿಯಲಿ. ಇದರಿಂದ ಅವರಿಗೇನು ಅನಾಹುತವಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಇದನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ನಾವೆಲ್ಲ ಧರಣಿ ಕುಳಿತುಕೊಳ್ಳುತ್ತೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಮತ್ತು ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ ಚುನಾಯಿತ ಪ್ರತಿನಿಧಿಯ ನಗರಸಭೆಯನ್ನು ಇವರು ಈ ರೀತಿಯಾಗಿ ಕಗ್ಗೊಲೆ ಮಾಡಿರತಕ್ಕಂಥದನ್ನು ಪ್ರತಿಭಟನೆ ಮಾಡಿ, ಈ ಸರ್ಕಾರ ಮಾಡಿರತಕ್ಕಂಥ ಆದೇಶವನ್ನು ವಾಪಸ್ಸು ತೆಗೆದುಕೊಳ್ಳುವವರೆಗೆ ನಾವೆಲ್ಲರೂ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಎಲ್ಲಾ ಸದಸ್ಯರು ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಸದನದ ಬಾವಿಯಲ್ಲಿ ನಿಂತುಕೊಂಡು ಮಾನ್ಯ ಸದಸ್ಯರು ಮಾತನಾಡುತ್ತಿದ್ದರು)

ಅಧ್ಯಕ್ಷರು:– ಈ ಸಭೆಗೆ ದಯಮಾಡಿ ಎಲ್ಲರು ಗೌರವ ತರಬೇಕು. ಈಗ ಸಭೆಯನ್ನು 15 ನಿಮಿಷಗಳವರೆಗೆ ಮುಂದೂಡಲಾಗಿದೆ.

(ಸಭೆಯು 12 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 15 ನಿಮಿಷದ ನಂತರ ಸೇರಲು ನಿಶ್ಚಯಿಸಿತು)

ಸಭೆಯು ಮಧ್ಯಾಹ್ನ 1ಗಂಟೆ 21 ನಿಮಿಷಕ್ಕೆ ಪುನಾರಂಭಗೊಂಡಿತು.

ಶ್ರೀ ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಶ್ರೀ ವಾಟಾಳ್ ನಾಗರಾಜ್ :– ಅಧ್ಯಕ್ಷರೆ ಬಳ್ಳಾರಿ ವಿಚಾರದಲ್ಲಿ ನೀವು ಸರ್ಕಾರದ ನಿರ್ಧಾರ ಹೇಳಿದರೆ ನಾವೊಂದು ತೀರ್ಮಾನ ತೆಗೆದುಕೊಳ್ಳಬಹುದು ಅಂತ. ಆದ್ದರಿಂದ ಮಾನ್ಯ ಖರ್ಗೆಯವರು ಸರ್ಕಾರದ ಪರವಾಗಿ ಹೇಳಿಕೆ ಕೊಡಬೇಕೆಂದು ಕಳಕಳಿಯಿಂದ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅಧ್ಯಕ್ಷರೆ ಬಳ್ಳಾರಿ ಸಿಟಿ ಮುನಿಸಿಪಾಲಿಟಿಗೆ ಅದು ಕಾರ್ಪೋರೇಷನಾಗಿ ಕನ್ವರ್ಟ್ ಆದ ಮೇಲೆ ಈಗ ಆಡಳಿತಾಧಿಕಾರಿ ಏನು ಹಾಕಿದ್ದಾರೆ ಅದು ಸರಿಯಿಲ್ಲ ಎಂಬ ವಾದವನ್ನು ಸದನದ ಮುಂದೆ ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗು ಈಶ್ವರಪ್ಪನವರು, ಮಾಧುಸ್ವಾಮಿ, ವಾಟಾಳ್ ನಾಗರಾಜ್ ಶ್ರೀರಾಮರೆಡ್ಡಿ ಎಲ್ಲರೂ ಕೂಡ ಹೇಳಿದ್ದಾರೆ. ವಿಶೇಷವಾಗಿ ಬಳ್ಳಾರಿ ಶಾಸಕರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೆಲವು ಜನರಿಗೆ ವಸ್ತುಸ್ಥಿತಿ ಕೂಡ ಗೊತ್ತಿಲ್ಲ. ಅಲ್ಲಿರುವ ಸಿಟಿ ಮುನಿಸಿಪಾಲಿಟಿಯನ್ನು ಕಾರ್ಪೋರೇಷನಾಗಿ ಕನ್ವರ್ಟಾದ

ಮೇಲೆ 6 ತಿಂಗಳು ಅದು ಅಸ್ತಿತ್ವದಲ್ಲಿದೆ. ಆ 6 ತಿಂಗಳ ಅವಧಿಯಲ್ಲಿ ಹಿಂದೆ ಇದ್ದ ಕೌನ್ಸಿಲರ್‌ಗಳನ್ನೇ ಕಂಟಿನ್ಯೂ ಮಾಡಿ ಇಟ್ಟಿದ್ದಾರೆ. ಆ 6 ತಿಂಗಳ ಒಳಗಡೆ ನಾವು ಚುನಾವಣೆ ನಡೆಸಬೇಕಾಗಿತ್ತು. ದುರ್ದೈವದಿಂದ ಚುನಾವಣೆ ನಡೆಸಲಿಕ್ಕಾಗಲಿಲ್ಲ. ಆ 6 ತಿಂಗಳ ಅವಧಿ ನಿನ್ನೆ ಮುಗಿಯಿತು. ಆದ್ದರಿಂದ ಪುನಃ 6 ತಿಂಗಳಿಗೆ ಎಕ್ಸ್‌ಟೆಂಡ್ ಮಾಡಿ ಡಿಲಿಮಿಟೇಶನ್ ಮಾಡಿ ಚುನಾವಣೆಗೆ ಹೋಗಬೇಕು ಎಂಬ ದೃಷ್ಟಿಯಿಂದ ಅಡ್ಮಿನಿಸ್ಟ್ರೇಟರ್ ಹಾಕಿದ್ದೇ ಹೊರತು ಅವರ ಅವಧಿಯನ್ನು ಮೊಟಕುಗೊಳಿಸಬೇಕೆಂಬ ದೃಷ್ಟಿಯಿಂದ ಅಲ್ಲ. ಇದು ಭಿನ್ನಾಭಿಪ್ರಾಯ. ರಾತ್ರಿ ಮುಖ್ಯಮಂತ್ರಿಗಳು ದೆಹಲಿಯಿಂದ ಬರುತ್ತಾರೆ. ನಾಳೆ ಇನ್ನೊಂದು ಸಲ ಕ್ಲಾರಿಫೀಕೇಶನ್ ಅಥವಾ ತಮ್ಮ ಚೇಂಬರಿನಲ್ಲೇ ಕೂತು ಮಾತನಾಡಬಹುದು. ಆಮೇಲೆ ಈಗಾಗಲೇ ನಾನು ಗಮನಿಸಿರುವ ಪ್ರಕಾರ, ನಾನು ಕಾನೂನು ಇಲಾಖೆ ಕಡತವನ್ನೂ ನೋಡಿದ್ದೇನೆ. 6 ತಿಂಗಳ ಅವಧಿ ಮುಗಿದು ಇನ್ನಾರು ತಿಂಗಳ ಅವಧಿಗೆ ವಿಸ್ತರಿಸಿದ್ದು ಕೇವಲ ಡಿಲಿಮಿಟೇಶನ್ ಮಾಡಿ ಚುನಾವಣೆ ಮಾಡಬೇಕೆಂದು ಮಾಡಿದ್ದು, ಅದಕ್ಕೇ ಆಡಳಿತ ಗಾರರನ್ನು ಹಾಕಿದ್ದು, ಅದಕ್ಕಾಗಿ ಈಗೇನು ಸಿಟಿ ಮುನಿಸಿಪಾಲಿಟಿಯನ್ನು ಕಾರ್ಪೋರೇಷನ್ ಮಾಡಿ ಅಡ್ಮಿನಿಸ್ಟ್ರೇಟರ್ ಹಾಕಿದ್ದಲ್ಲ. ಕಾರ್ಪೋರೇಷನಾದ ಮೇಲೂ 6 ತಿಂಗಳ ಅವಧಿಯಲ್ಲಿ ಅವರು ಇದ್ದರು. ಅದೇನೆ ಇರಲಿ, ನಾಳೆ ಇದರ ಬಗ್ಗೆ ಸಂಪೂರ್ಣ ವಿವರಣೆಯನ್ನು ಪುನಃ ತಮ್ಮ ಚೇಂಬರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಮಾಡೋಣ. ಅದಕ್ಕಾಗಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಆಗಲೇ ಧರಣಿ ಮಾಡುವ ಒಂದು ಪ್ರಸಂಗ ನಡೆಯಿತು ದಯವಿಟ್ಟು ಅದನ್ನು ಹಿಂತೆಗೆದುಕೊಳ್ಳಬೇಕು. ನಾಳೆ ಇನ್ನೊಮ್ಮೆ ಚರ್ಚೆಯಾದ ಮೇಲೆ ಅವರೇನು ತೀರ್ಮಾನ ತೆಗೆದುಕೊಳ್ಳುವರೋ ಅದು ಅವರಿಗೆ ಬಿಟ್ಟಿದ್ದು. ನಾಳೆ ಮಾನ್ಯ ಮುಖ್ಯಮಂತ್ರಿಗಳೂ ಇದರ ಬಗ್ಗೆ ಸ್ಪಷ್ಟೀಕರಣ ಕೊಡುತ್ತಾರೆ ಅದನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು:– ಮಾನ್ಯ ಅಧ್ಯಕ್ಷರೇ ತಮ್ಮ ಕೊಠಡಿಯಲ್ಲಿ ಚರ್ಚೆಯಾಗಿದೆ. ಕಾರ್ಪೋರೇಷನಾದ ಮೇಲೂ ಅದೇ ಚುನಾಯಿತ ಪ್ರತಿನಿಧಿಗಳೇ ಮುಂದುವರೆದಿದ್ದರು. ಆ ಟೈಮಿನಲ್ಲಿ ಡಿಲಿಮಿಟೇಶನ್ ಎಲ್ಲ ಮಾಡಿ ಚುನಾವಣೆ ಘೋಷಣೆ ಮಾಡಿದ್ದಿದ್ದರೆ ನಮ್ಮ ಅಭ್ಯಂತರವೇನೂ ಇರಲಿಲ್ಲ. ಯಾವ ರೀತಿ 6 ತಿಂಗಳು ಮುಂದೂಡಿ ಕಾರ್ಪೋರೇಷನ್ ಮಾಡಿ ಡಿಲಿಮಿಟೇಶನ್ ಪ್ರೋಸೆಸ್ ಆಗಲಿಲ್ಲವೋ ಅದೇ ರೀತಿ ಇನ್ನಾರು ತಿಂಗಳು ನೀವೇನು ಮುಂದೂಡಿದ್ದೀರಿ ಆ ಅವಧಿಯಲ್ಲಿ ಡಿಲಿಮಿಟೇಷನ್ ಎಲ್ಲ ಮುಗಿಸಿಕೊಂಡು ಚುನಾವಣೆ ಮಾಡಿ, ಈಗ ಹೇಗೆ 6 ತಿಂಗಳು ಅವರು ಮುಂದುವರೆದಿದ್ದಾರೋ ಅದೇ ರೀತಿ ಮುಂದುವರೆಯಬೇಕು ಎಂಬುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು

ಕೇಳಬೇಕಾದ್ದು ನೀವು ಮಾಡಬೇಕಾದ್ದು ಇವತ್ತು ಸಮ್ಮಿಶ್ರ ಸರ್ಕಾರ ಇದೆ. ಅನೇಕ ತತ್ವ ನೀತಿ ಸಿದ್ಧಾಂತದ ಬಗ್ಗೆ ನಾವು ಮಾತನಾಡುತ್ತೇವೆ. ಜೆಡಿಎಸ್ ಮುಖಂಡರು ಕಾಂಗ್ರೆಸ್‌ನವರೂ ನಾಳೆ ಕುಳಿತುಕೊಂಡು ಮುಖ್ಯಮಂತ್ರಿಗಳ ಜೊತೆ ಮಾತನಾಡೋಣ. ಪ್ರತಿಪಕ್ಷವನ್ನು ಹತ್ತಿಕ್ಕುವ ಕೆಲಸ ನೀವು ಮಾಡಿದರಿ ಅಂತ ಮೆಸೇಜು ಏನು ಹೋಗುತ್ತದೆ ಅದು ಆಗುತ್ತದೆ. ಎರಡನೆಯದರು ತುಮಕೂರು ಇತ್ಯಾದಿಗಳನ್ನೂ ಕಾರ್ಪೋರೇಷನ್ ಮಾಡಿದಿರಿ, ಅಲ್ಲಿ ಯಾವುದಕ್ಕೂ ಕೈ ಹಾಕಲಿಲ್ಲ. ಏಕೆಂದರೆ ಆಡಳಿತ ಪಕ್ಷ ನೀವೇ ಅಲ್ಲಿ ಇದ್ದೀರಿ, ಇಲ್ಲಿ ವಿರೋಧ ಪಕ್ಷದವರು ಇದ್ದಾರೆ ಅಂತ ಪ್ರಜಾತಂತ್ರ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂತಹ ಹಿಚುಕುವಂತಹ ಕೆಲಸ ನೀವು ಮಾಡುತ್ತೀದ್ದೀರಿ ಎಂಬ ಭಾವನೆ ಬರುವುದು ಬೇಡ. ಮುಖ್ಯಮಂತ್ರಿಗಳು ಬರಲಿ, ಮಾತನಾಡೋಣ, ನೀವೂ ಕೂಡ ಸರಿಯಾದ ರೀತಿ ಒಂದು ಸಲಹೆ ಕೊಟ್ಟು ಈ ಬಾರಿ ಮುಂದುವರೆಯಲಿ ಇನ್ನಾರುತಿಂಗಳು ಚುನಾವಣೆ ಆಗಲಿ, ಕಾರ್ಪೋರೇಷನ್ ಮಾಡಲು ನಮ್ಮದು ಯಾರದೂ ಅಭ್ಯಂತರ ಇಲ್ಲ. ಅದಕ್ಕೆ ಅವಕಾಶ ಮಾಡಿಕೊಡಬೇಕು, ಬರಲಿ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ 10ಗಂಟೆಗೆ ನಿಮ್ಮ ಕೊಠಡಿಯಲ್ಲಿ ಸೇರೋಣ.

ಶ್ರೀ ವಾಟಾಳ್ ನಾಗರಾಜ್ : ಈ ಸದನ ನಡೆಯುವಾಗ ಚರ್ಚೆಗೆ ತಂದು ಮಾಡಬಹುದಿತ್ತು. ಒಂದು ಕಡೆ ಸದನ ನಡೆದಿದ್ದರೆ ಇನ್ನೊಂದು ಕಡೆ ನೀವು ರದ್ದು ಮಾಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವಧಿ ಮುಗಿದ ಮೇಲೆ ಕಂಟಿನ್ಯೂ ಮಾಡಬೇಕೋ ಬಿಡಬೇಕೋ ಎಂಬ ಅಧಿಕಾರ ಸಚಿವರಿಗಿದೆ, ಕಾನೂನಿನಲ್ಲಿ. ಅದರ ಬಗ್ಗೆ ತಂದು ಇಲ್ಲಿ ಚರ್ಚೆ ಮಾಡಬೇಕಾಗಿತ್ತು ಅನ್ನುವದು... ಅವರೇನೋ ಪಕ್ಷದ ಹಿತದೃಷ್ಟಿಯಿಂದ ಅವರ ಶಾಸಕರು ಹೇಳಿದ್ದನ್ನು ಇಲ್ಲಿ ತಂದು ಚರ್ಚೆ ಮಾಡಿದ್ದಾರೆ. ಆದರೆ ಪ್ರತಿ ಆಡಳಿತಾತ್ಮಕ ನಿರ್ಣಯವನ್ನು ಇಲ್ಲಿ ಚರ್ಚೆ ಮಾಡಬೇಕೆಂದರೆ ಅದು ಸರಿ ಹೋಗುವುದಿಲ್ಲ. ತಾವು ಸ್ವಲ್ಪ ತರಾತುರಿಯಲ್ಲಿ ಒಳಗಡೆ ಬಂದಿರಿ. ಇದು ಮೊದಲೇ ಗೊತ್ತಿದ್ದಿದ್ದರೆ ಖಂಡಿತಾ ನೀವೂ ಮಾಧುಸ್ವಾಮಿ ಒಳಗಡೆ ಬರುತ್ತಾ ಇರಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೇ ಅಧಿಸೂಚನೆಯಲ್ಲಿ ಒಂದು ಸಮಸ್ಯೆ ಇದೆ. ಇಲ್ಲೊಂದು ವಾಕ್ಯ ಇದೆ. The period forfating completion of election has been extended by six months. The body performing the duties of the city corporation, Bellary is dissolved. That means, House disolved.

ಆದರೆ ಈ ಅಧಿಸೂಚನೆಯಲ್ಲಿ ಅಡ್ಮಿನಿಸ್ಟ್ರೇಟರನ್ನು ನೇಮಿಸಲು ತಂದಿರುವ ಅಧಿಸೂಚನೆಯಲ್ಲಿ ಬಾಡಿ ಡಿಸಾಲ್ವ್ ಮಾಡಿದ್ದನ್ನು ಸೇರಿಸಿಬಿಡುವುದು ಕರೆಕ್ಟಲ್ಲ. ಸೆಪರೇಟಾಗಿ ನೀವದನ್ನು ನೋಟಿಫೈ ಮಾಡಬೇಕಾಗುತ್ತದೆ. ನೀವು ಕಂಬೈನ್ಡ್

ಮಾಡಿದ್ದೀರಿ. 6 ತಿಂಗಳಾದ ಮೇಲೆ ಹೌಸನ್ನು ಡಿಸಾಲ್ವ್ ಮಾಡಬೇಕಾದರೆ ಅದಕ್ಕೆ ಸೆಪರೇಟ್ ಅಧಿಸೂಚನೆ ಮಾಡಬೇಕಾಗುತ್ತದೆ. ಆಡಳಿತಾಧಿಕಾರಿಗೆ ಸಪರೇಟ್ ಅಧಿಸೂಚನೆ ಮಾಡಬೇಕಾಗಿರುತ್ತದೆ. ಏಕೆಂದರೆ Appointing the Administrator is under different section. Dissooving the House is under different section. ಹಾಗಾಗಿ ಎರಡನ್ನೂ ಒಂದೇ ಅಧಿಸೂಚನೆಯಲ್ಲಿ ತಂದಿರುವದು ಕರೆಕ್ಟಲ್ಲ. This notification itself is infectious. Because you have brought the two things in the same notification. Because appointing the administrator is under different section. This notification itself is infectious. Because you have brought the two things in the same notification. Because appointing the administrator is under different section and dissolving the House is under different section. You have brought the two in the same notification.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾಳೆ ಅದನ್ನೆಲ್ಲಾ ಕ್ಲಾರಿಫೈ ಮಾಡುವೆವು.

ಅಧ್ಯಕ್ಷರು: ಈಗ ಆರೋಗ್ಯ ಸಚಿವರಾಗಿ ಮಾನ್ಯ ಚೆಲುವರಾಯಸ್ವಾಮಿಯವರು ಶಾಸಕರಾಗಿ ಬ್ಯಾಂಕ್ವೆಟ್ ಹಾಲಿನಲ್ಲಿ ಭೋಜನ ಕೂಡ ಮಾಡಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ತಮ್ಮ ಗಮನಕ್ಕೆ ತಂದಿದ್ದೆ ಸ್ಟಾರ್ ಟಿವಿ ಬಗ್ಗೆ, ಲಾಲ್‌ಬಾಗಿನಲ್ಲಿ ಪ್ರಚಾರಕ್ಕಾಗಿ ಐದು ದಿವಸ ಮಂತ್ರಿಗಳಿಗೆ ಗೊತ್ತಿರಲಿಲ್ಲ. ಸರ್ಕಾರದ ಎಲ್ಲ ಸವಲತ್ತು ಉಪಯೋಗಿಸಿಕೊಂಡು ಕ್ರಿಕೆಟ್ ಪ್ರಚಾರಕ್ಕಾಗಿ ಇತಿಹಾಸದಲ್ಲಿ ಲಾಲ್‌ಬಾಗನ್ನು ಯಾರಿಗೂ ಕೊಟ್ಟಿಲ್ಲ. ಖಾಸಗಿ ಸ್ಟಾರ್ ಟಿವಿಗೆ ಕೊಡತಕ್ಕಂತಹದ್ದೇನು? ಸರ್ಕಾರ ಎಲ್ಲಿದೆ? ಸರ್ಕಾರದ ವ್ಯವಸ್ಥೆಯೇನು? ಯಾರು ಕೊಟ್ಟವರು? ಅವರು ಕೊಟ್ಟಿರುವ ಹಣ ಬಹಳ ನಾಮಿನಲ್ ಕೋಟ್ಯಾಂತರ ರೂ ಅವರಿಗೆ ಬರುತ್ತದೆ. ವೈಯಕ್ತಿಕವಾಗಿ ಅವರ ಬಗ್ಗೆ ಅಗೌರವ ತೋರಿಸುತ್ತೇ ಅಂತ ಅಲ್ಲ. ಅವರ ಬಗ್ಗೆ ನಾನು ಕೆಟ್ಟದ್ದು ಹೇಳುತ್ತಾ ಇಲ್ಲ. ಇದೊಂದು ವ್ಯವಸ್ಥೆ ಸರ್ಕಾರ ಇದೆ, ನೀವು ದೊಡ್ಡ ಲಾಲ್‌ಬಾಗನ್ನು ಕೊಡುವ ಪರಿಪಾಠ ಇದೆಯೇ ಕೊಡುವುದಾದರೆ ಮುಂದೆ ಎಲ್ಲ ಖಾಸಗಿಯವರಿಗೆ ನೀವು ಕೊಡಬೇಕಾಗುತ್ತದೆ. ನೀವು ಹೇಳಿ ನೀವೇನು ಮಾಡಿದ್ದೀರಿ. ನಿಮ್ಮ ಸರ್ಕಾರದ ನಿಲುವೇನು? ನೀವು ಹೇಳಿದಿರಿ ನನಗೆ ಗೊತ್ತೇ ಇಲ್ಲ ಅಂತ. ಯಾರು ಕೊಟ್ಟವರು? ಯಾವ ಉದ್ದೇಶಕ್ಕಾಗಿ ಕೊಟ್ಟಿರಿ? ಬಹಳ ಚೀಪ್ ಆಗಿ ಕೊಟ್ಟೀದೀರಿ. ಕಡಿಮೆಯಾಗಲಿ, ದೊಡ್ಡಗಾಗಲಿ ಅದನ್ನು ಕೊಡಕೂಡದು. ಯಾವ ಕಾರಣಕ್ಕೂ ಕೊಡಕೂಡದು. ನೀವ್ಯಾಕೆ ಕೊಟ್ಟಿರಿ? ಯಾವ ಉದ್ದೇಶಕ್ಕೆ ಕೊಟ್ಟಿರಿ? ಕೊಡತಕ್ಕದ್ದು ಅಪರಾಧವಾಗಿದೆ. ಇದರ ಬಗ್ಗೆ ಸರ್ಕಾರದ ನಿಲುವೇನು? ಅದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಯಾವುದೇ ಖಾಸಗಿ ಸಂಸ್ಥೆಗೂ